ದೂರವಾಣಿ/ಫ್ಯಾಕ್ಸ್ : 27526208
ವೆಬ್‌ಸೈಟ್: www.kanakapura-pa.in

# ಕನಕಪುರ ಯೋಜನಾ ಪ್ರಾಧಿಕಾರ

ಮುನ್ಸಿಪಲ್ ಖಾತಾ ನಂ. 297 : 271, ರಂಗನಾಥಸ್ವಾಮಿ ದೇವಸ್ಥಾನ ರಸ್ತೆ, ಕೋಟೆ, ಕನಕಪುರ – 562 117

## ಪ್ರಾರಂಭಿಕ ಪ್ರಮಾಣ ಪತ್ರ
(ನಮೂನೆ-3)

ಸಂಖ್ಯೆ: ಕಯೋಪ್ರಾ:ಎಲ್ಎ.:19:2012-13/770 ದಿನಾಂಕ: 16.03.2013

ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗುಳಕಮಲೆ ಗ್ರಾಮದ ಸರ್ವೆ ನಂ. 83/1ರಲ್ಲಿ 2 ಎಕರೆ, 83/2ರಲ್ಲಿ 2-08 ಎ:ಗು, 84/2ರಲ್ಲಿ 2-07 ಎ:ಗು, 85/1ರಲ್ಲಿ 0-39 ಗುಂಟೆ, 86/2ರಲ್ಲಿ 1-12 ಎ:ಗು, 86/3ರಲ್ಲಿ 1-12 ಎ:ಗು, 87/9ರಲ್ಲಿ 0-15 ಗುಂಟೆ ಮತ್ತು ಕಗ್ಗಲೀಪುರ ಗ್ರಾಮದ ಸರ್ವೆ ನಂ. 291ರಲ್ಲಿ 1-06 ಎ:ಗು ಮತ್ತು 285/1ರಲ್ಲಿ 1-30 ಎ:ಗು ಒಟ್ಟು 13 ಎಕರೆ 09 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ. 40ರ ನಿವೇಶನ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1.) ಅರ್ಜಿದಾರರ ಅರ್ಜಿ ದಿನಾಂಕ: 15.01.2013
2.) ದಿನಾಂಕ: 29.01.2013ರಂದು ನಡೆದ ಪ್ರಾಧಿಕಾರದ 42ನೇ ಸಭೆಯ ವಿಷಯ ಸಂಖ್ಯೆ: 24.1ರ ನಿರ್ಣಯ
3.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್:(ಎಸ್)(ಉ): ಎಸ್ಆರ್:85:11-12 ದಿ:21.9.2011
4.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್)(ಉ): ಎಸ್ಆರ್:85:11-12 ದಿ:21.9.2011
5.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಉ): ಎಸ್ಆರ್:189:11-12 ದಿ: 7.2.2012
6.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಯು): ಎಸ್ಆರ್:33:11-12 ದಿ: 29.12.2012
7.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಯು): ಎಸ್ಆರ್:34:11-12 ದಿ: 22.11.2012
8.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಉ): ಎಸ್ಆರ್:179:10-11 ದಿ: 3.01.2012
9.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಉ): ಎಸ್ಆರ್:170:10-11 ದಿ: 3.01.2012
10.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಉ): ಎಸ್ಆರ್:190:11-12 ದಿ: 4.06.2012
11.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಉ): ಎಸ್ಆರ್:33:10-11 ದಿ: 12.01.2012
12.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಯು): ಎಸ್ಆರ್(ಕ):67:12-13 ದಿ: 29.12.2012
13.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಯು): ಎಸ್ಆರ್(ಕ):66:12-13 ದಿ: 04.1.2013
14.) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಎಲ್ಎನ್(ಎಸ್.ಯು): ಎಸ್ಆರ್(ಕ):35: 12-13 ದಿ: 22.11.2012
15.) ತಹಸೀಲ್ದಾರ್‌ರವರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ಪತ್ರ ಸಂಖ್ಯೆ: 11.03.2013

..2

16/3/13

16.) ಹಣಪಾವತಿ ಮಾಡಿದ ದಿನಾಂಕ: 15.03.2013
17.) ನೊಂದಾಯಿತ ಪರಿತ್ಯಾಜನಾ ಪತ್ರ ದಿನಾಂಕ: 16.03.2013

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(2)ರ ಪ್ರಾಧಿಕಾರದ ಸಭೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಗುಳಕಮಲೆ ಗ್ರಾಮದ ಸರ್ವೆ ನಂ. 83/1ರಲ್ಲಿ 2 ಎಕರೆ, 83/2ರಲ್ಲಿ 2-08 ಎ:ಗು, 84/2ರಲ್ಲಿ 2-07 ಎ:ಗು, 85/1ರಲ್ಲಿ 0-39 ಗುಂಟೆ, 86/2ರಲ್ಲಿ 1-12 ಎ:ಗು, 86/3ರಲ್ಲಿ 1-12 ಎ:ಗು, 87/9ರಲ್ಲಿ 0-15 ಗುಂಟೆ ಮತ್ತು ಕಗ್ಗಲೀಪುರ ಗ್ರಾಮದ ಸರ್ವೆ ನಂ. 291ರಲ್ಲಿ 1-06 ಎ:ಗು ಮತ್ತು 285/1ರಲ್ಲಿ 1-30 ಎ:ಗು ಒಟ್ಟು 13 ಎಕರೆ 09 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿದೆ. ಉಲ್ಲೇಖ(3) ರಿಂದ ಉಲ್ಲೇಖ(14)ರಂತೆ ಸದರಿ ಜಮೀನುಗಳು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಂಡಿರುತ್ತದೆ.

ತಹಸೀಲ್ದಾರರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರನ್ನು ಪ್ರಶ್ನಿತ ವಿನ್ಯಾಸದ ಎಲ್ಲೆ/ಖರಾಬು/ ನಕಾಶೆ ದಾರಿ/ಸಂಪರ್ಕ ರಸ್ತೆ/ ರೈಲ್ವೆ/ರಾಜಕಾಲುವೆ/ಸರ್ಕಾರಿ ಜಮೀನು/ ಕೆರೆ/ಗೋಮಾಳಗಳಿಗೆ ಸಂಬಂಧಿಸಿದಂತೆ ಹಾಗೂ ಪ್ರಶ್ನಿತ ಜಮೀನುಗಳು ಕಂದಾಯ ಇಲಾಖೆಯಿಂದ ಭೂ-ಪರಿವರ್ತನೆಯಾಗಿರುವ ಬಗ್ಗೆ ಹಾಗೂ ಭೂ ಪರಿವರ್ತನೆ ಆದೇಶವು ಚಾಲ್ತಿಯಲ್ಲಿ ಇರುವ ಬಗ್ಗೆ ಪ್ರಾಧಿಕಾರದಿಂದ ವರದಿ ಕೋರಿದ್ದು, ಈ ಬಗ್ಗೆ ಪರಿಶೀಲಿಸಿ ಉಲ್ಲೇಖ(15)ರಂತೆ ವರದಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಉಲ್ಲೇಖ(16) ರಲ್ಲಿ ಶುಲ್ಕಗಳನ್ನು ಪಾವತಿಸಿರುತ್ತಾರೆ. ಹಾಗೂ ಸದರಿ ವಸತಿ ವಿನ್ಯಾಸದಲ್ಲಿರುವ ಉದ್ಯಾನವನ ಮತ್ತು ರಸ್ತೆಗಳ ಪ್ರದೇಶಗಳನ್ನು ಉಲ್ಲೇಖ(17)ರಲ್ಲಿನ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುತ್ತಾರೆ. ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ಪ್ರಕರಣ 17ರಡಿಯಲ್ಲಿ **ಶ್ರೀ ಆರ್. ರಮೇಶ್ ಮತ್ತು ಇತರರು, ನಂ. 51, 2ನೇ ಮಹಡಿ, 4ನೇ ಮೈನ್, 5ನೇ ಕ್ರಾಸ್, ಕೆ.ಇ.ಬಿ. ಲೇಔಟ್, ಸಂಜಯ ನಗರ್, ಬೆಂಗಳೂರು-94** ಇವರಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಬಗ್ಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾರ್ಯ ಪ್ರಾರಂಭಿಸಲು ಅನುಮತಿ ನೀಡಿ ಈ ಕೆಳಗಿನ ನಿಬಂಧನೆಗಳೊಡನೆ ನಕ್ಷೆಯನ್ನು ಅನುಮೋದಿಸಲಾಗಿದೆ.

1. ಈ ಅನುಮೋದಿತ ವಸತಿ ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ( ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ಈ ಅವಧಿಯಲ್ಲಿ ಬಡಾವಣೆ ಅಭಿವೃದ್ಧಿಯ ಕೆಲಸಗಳು ಪೂರ್ಣಗೊಳ್ಳದಿದ್ದಲ್ಲಿ ಕೂಡಲೇ ನವೀಕರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯು ಯಾವ ಸೂಚನೆಯೂ ಇಲ್ಲದೆ ತಂತಾನೆ ರದ್ದಾಗುತ್ತದೆ.

2. ಈ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿ ಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು.

3. ಈ ಅನುಮೋದಿತ ವಸತಿ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗದರ್ಶನದಲ್ಲಿ ಸ್ಥಾಪಿಸಬೇಕು.

4. ಈ ವಸತಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಗ್ರಾಮ ಪಂಚಾಯಿತಿ ಕಾಯಿದೆಯಡಿ ಅನುಮತಿ ಪಡೆಯತಕ್ಕದ್ದು.

...3

Sadly 16/3/13

ಕನಕಪುರ ಯೋಜನಾ ಪ್ರಾಧಿಕಾರ ಕಾರ್ಯಾಲಯ
ನಂ. 297 : 271, ರಂಗನಾಥಸ್ವಾಮಿ ದೇವಸ್ಥಾನ ರಸ್ತೆ,
ಕೋಟೆ, ಕನಕಪುರ - 562 117

5. ಈ ಅನುಮೋದಿತ ವಸತಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಮಳೆ ನೀರು ಪೋಲಾಗುವುದನ್ನು ತಡೆದು, ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

6. ಈ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ, ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು. ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.

7. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.

8. ಈ ಅನುಮೋದಿತ ವಸತಿ ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು. ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನಕ್ಕಾಗಿ ಮತ್ತು ನಾಲಾ ಬಫರ್ ಪ್ರದೇಶದಲ್ಲಿ ಗಿಡಗಳನ್ನು ನೆಟ್ಟು Tree park ಆಗಿ ಅಭಿವೃದ್ಧಿ ಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

9. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಭಂದಿಸತಕ್ಕದ್ದಲ್ಲ.

10. ಈ ಅನುಮೋದನೆಯ ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ದಾಖಲೆ ಎಂದು ನ್ಯಾಯಾಲಯ ಅಥವಾ ಇತರೆ ಇಲಾಖೆಗಳಿಗೆ ಸಲ್ಲಿಸಲು ಬರುವುದಿಲ್ಲ.

11. ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

12. ಈ ವಸತಿ ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ.

13. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ:599:ಮೈಅಪ್ರಾ: 2012 ದಿನಾಂಕ: 03.12.2012ರಲ್ಲಿನ ಮಾರ್ಗಸೂಚಿಯಂತೆ ಮೊದಲ ಹಂತದಲ್ಲಿ ಶೇ. 40ರಷ್ಟು ನಿವೇಶನಗಳ ಬಿಡುಗಡೆಗೊಳಿಸಿ, ಉಳಿದ ಶೇ. 60ರ ನಿವೇಶನಗಳ ಪೈಕಿ 2ನೇ ಹಂತದಲ್ಲಿ, ಶೇ. 30ರಷ್ಟು ನಿವೇಶನಗಳನ್ನು ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳು (ರಸ್ತೆ, CD works ಹಾಗೂ ಚರಂಡಿ ಕೆಲಸಗಳು) ಪೂರ್ಣಗೊಳಿಸಿದ ನಂತರ ಬಾಕಿ ಉಳಿದ ಶೇ. 30ರಷ್ಟು ನಿವೇಶನಗಳ ವಿನ್ಯಾಸವನ್ನು ಸಂಪೂರ್ಣವಾಗಿ (ನೀರು ಸರಬರಾಜು, ಒಳಚರಂಡಿ, ವಿದ್ಯುತ್ ಚ್ಛಕ್ತಿ, ರಸ್ತೆ) ಅಭಿವೃದ್ಧಿಪಡಿಸಿದ ನಂತರ ಬಿಡುಗಡೆಗೊಳಿಸಲಾಗುವುದು.

14. ಈ ಅನುಮೋದಿತ ವಸತಿ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

16/3/13

ಕನಕಪುರ ಯೋಜನಾ ಪ್ರಾಧಿಕಾರ ಕಾರ್ಯಾಲಯ
ನಂ. 297 : 271, ರಂಗನಾಥಸ್ವಾಮಿ ದೇವಸ್ಥಾನ ರಸ್ತೆ
ಕೋಟೆ, ಕನಕಪುರ - 562 117

15. ಕೊಳವೆ ಬಾವಿಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ(ಸಿವಿಲ್) ಸಂಖ್ಯೆ: 36:2009: ರಲ್ಲಿ ದಿನಾಂಕ: 06.08.2010 ರಂದು ನೀಡಿರುವ ತೀರ್ಪನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಬಗ್ಗೆ ಸಂಬಂಧಪಟ್ಟ ಪುರಸಭೆ/ಗ್ರಾಮಪಂಚಾಯಿತಿಗಳು ನಿಯಮಾವಳಿಗಳನ್ವಯ ಅಗತ್ಯ ಕ್ರಮ ಜರುಗಿಸತಕ್ಕದ್ದು.

16. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 17(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

16/3/13

ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ,
ಹಾಗೂ ಸದಸ್ಯ-ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ,
ಕನಕಪುರ.

ಇವರಿಗೆ,

**ಶ್ರೀ ಆರ್. ರಮೇಶ್ ಮತ್ತು ಇತರರು, ನಂ. 51, 2ನೇ ಮಹಡಿ, 4ನೇ ಮೈನ್, 5ನೇ ಕ್ರಾಸ್, ಕೆ.ಇ.ಬಿ. ಲೇಔಟ್, ಸಂಜಯ ನಗರ್, ಬೆಂಗಳೂರು-94**